ಕರ್ನಾಟಕ ಸರ್ಕಾರ

(ಕೃಷಿ ಇಲಾಖೆ)

ವಿಷಯ:– ರೈತ ಸಂಪರ್ಕ ಕೇಂದ್ರಗಳ ಬಾಡಿಗೆ ದರದ ಬಗ್ಗೆ.

ಉಲ್ಲೇಖ:– 1. ಈ ಕಛೇರಿ ಆದೇಶದ ಸಂಖ್ಯೆ: ರೈಸಂಕೇ/ತಾ.1/8/08, ದಿನಾಂಕ 29/11/2008.

2. ದಿನಾಂಕ: 20/04/12ರಂದು ಇಲಾಖೆಯ ಮುಂಗಾರು ಹಂಗಾಮಿನ ಕಾರ್ಯಾಗಾರದಲ್ಲಿ ಚರ್ಚೆ.

3. ರೈತ ಸಂಪರ್ಕ ಕೇಂದ್ರ ವಿಭಾಗ ಕಡತದ ಸಂ: ರೈಸಂಕೇ/ತಾ.1/08/08ರ ಕಂಡಿಕೆ 154ರ ಅಭಿಪ್ರಾಯ.

* * * *

ರಾಜ್ಯದಲ್ಲಿ ಸ್ವಂತ ಕಟ್ಟಡವಿಲ್ಲದೆ ಹಲವಾರು ರೈತ ಸಂಪರ್ಕ ಕೇಂದ್ರಗಳನ್ನು ಬಾಡಿಗೆ ಕಟ್ಟಡಗಳಲ್ಲಿ ನಡೆಸಿಕೊಂಡು ಬರಲಾಗುತ್ತಿದೆ. ಉಲ್ಲೇಖ(1)ರ ದಿನಾಂಕ: 29-11-08 ಕಛೇರಿ ಆದೇಶದಲ್ಲಿ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ರೈತ ಸಂಪರ್ಕ ಕೇಂದ್ರಗಳ ಕಟ್ಟಡಕ್ಕೆ ಸ್ಥಳೀಯ ಲೋಕೋಪಯೋಗಿ ಇಲಾಖೆ ನಿಗದಿಪಡಿಸುವ ಬಾಡಿಗೆ ಮೊತ್ತ ಅಥವಾ ಇಲಾಖೆಯಿಂದ ನಿಗದಿಪಡಿಸಿದ ಗರಿಷ್ಟ ಮೊತ್ತ ಇವುಗಳಲ್ಲಿ ಯಾವುದು ಕಡಿಮೆ ಮೊತ್ತವೊ ಅದನ್ನು ಪಾವತಿಸಲು ಆದೇಶಿಸಿದೆ. ಆದರೆ, ಉಲ್ಲೇಖ(2)ರ ದಿನಾಂಕ:20-04-12ರ ಮುಂಗಾರು ಹಂಗಾಮಿನ ಕಾರ್ಯಾಗಾರದ ಚರ್ಚೆಯಲ್ಲಿ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರುಗಳು ತಮ್ಮ ತಮ್ಮ ಜಿಲ್ಲೆಗಳಲ್ಲಿ ಕಟ್ಟಡಗಳ ಬಾಡಿಗೆ ಹೆಚ್ಚಾಗುತ್ತಿದ್ದು, ಸದರಿ ಕಛೇರಿ ಆದೇಶದನ್ವಯ ಬಾಡಿಗೆ ಪಾವತಿಸುವುದು ಕಷ್ಟವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಉಲ್ಲೇಖ(3)ರ ದಿನಾಂಕ:29/11/2008ರ ಇಲಾಖೆಯ ಕಛೇರಿ ಆದೇಶದಲ್ಲಿ ವಿವಿಧ ಪ್ರದೇಶಗಳಿಗೆ ನಿಗದಿಪಡಿಸಲಾಗಿರುವ ಗರಿಷ್ಟ ಬಾಡಿಗೆಗೆ ಕಟ್ಟಡಗಳು ದೊರೆಯುವುದಿಲ್ಲವೆಂದು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಇಲಾಖಾ ಕಛೇರಿ ಆದೇಶವನ್ನು (ಉಲ್ಲೇಖ-1) ಮಾರ್ಪಡಿಸಿ ಈ ಕೆಳಕಂಡಂತೆ ಆದೇಶಿದೆ.

**ಕಛೇರಿ ಆದೇಶ ಸಂಖ್ಯೆ:ರೈಸಂಕೇ/ತಾ-1/08/2008, ಬೆಂಗಳೂರು,**
**ದಿನಾಂಕ: 28/05/2012.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭಗಳನ್ನು ಪರಿಶೀಲಿಸಿ, ಉಲ್ಲೇಖ(1)ರ ಕಛೇರಿ ಆದೇಶವನ್ನು ಮಾರ್ಪಡಿಸಿ ಈ ಕೆಳಕಂಡಂತೆ ರೈತ ಸಂಪರ್ಕ ಕೇಂದ್ರಗಳ ಕಟ್ಟಡಕ್ಕೆ ಬಾಡಿಗೆ ಪಾವತಿಸಲು ಆದೇಶಿಸಿದೆ.

ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ರೈತ ಸಂಪರ್ಕ ಕೇಂದ್ರಗಳ ಕಟ್ಟಡ ಬಾಡಿಗೆಯನ್ನು ಸ್ಥಳೀಯ ಲೋಕೋಪಯೋಗಿ ಇಲಾಖೆಯು ನಿಗದಿಪಡಿಸುವ ಬಾಡಿಗೆ ಮೊತ್ತವನ್ನು ಪಾವತಿಸಲು ಕ್ರಮ ಕೈಗೊಳ್ಳಲು ಆದೇಶಿಸಿದೆ.

(ಕರಡು ಕೃಷಿ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.)

ಕೃಷಿ ನಿರ್ದೇಶಕರ ಪರವಾಗಿ

ಪ್ರತಿಯನ್ನು ಅಗತ್ಯ ಕ್ರಮ ಹಾಗೂ ಮಾಹಿತಿಗಾಗಿ ಕಳುಹಿಸಿದೆ.

1. ಎಲ್ಲಾ ಜಿಲ್ಲಾಜಂಟಿ ಕೃಷಿ ನಿರ್ದೇಶಕರು.
2. ಎಲ್ಲಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು.